

ಹೇಳಬೇಕಾಗಿಲ್ಲ. ಅವು ಪೀಡೆಯಾಗತೊಡಗಿದಂತೆ ಮತ್ತು ಅವುಗಳ ಉಚ್ಚಾಟನೆಯ ಎಲ್ಲ ಉಪಾಯಗಳು ವಿಫಲಗೊಂಡಾದ ಮೇಲೆ, ಅವುಗಳ ಕುರಿತು ಅನುಕಂಪ ಕಡಿಮೆ ಆಗಿ, ಪ್ರತೀಕಾರ ಮನೋಭಾವ ಬೆಳೆಯತೊಡಗಿ, ಅವುಗಳ ಸಂಹಾರ ಕುರಿತು ಚಿಂತಿಸಬೇಕಾಗುತ್ತದೆ. ಸೊಳ್ಳೆ ಕಡಿತದಿಂದ ಉಂಟಾಗುವ ಉರಿತ ಕೆರೆತಗಳು, ನಿದ್ರಾಭಂಗ, ರೋಗರುಜಿನಗಳ ಆಗಮನದಿಂದ ಅವುಗಳ ಬಗ್ಗೆ ಯಾವುದೇ ರೀತಿಯ ಸಹಾನುಭೂತಿ ಉಳಿಯದಂತಾಗಿ ನಮ್ಮ ಸೊಳ್ಳೆ ಸಂಹಾರ ಕಾರ್ಯ ಎಷ್ಟೋ ವರ್ಷಗಳ ಹಿಂದೆ ಆರಂಭಗೊಂಡಿತು ಎಂದು ಹೇಳಬಹುದು. ಅವುಗಳನ್ನು ನಾವು ಹತ್ಯೆಗೈಯ್ಯದಿದ್ದರೆ ಅವು ನಮ್ಮನ್ನು ನಿಧಾನವಾಗಿ ಮುಗಿಸಿಬಿಡುತ್ತವೆ ಎಂದು ನಾವು ಬದುಕುವುದಕ್ಕಾಗಿ ಅವುಗಳ ಪ್ರಾಣಹರಣಕ್ಕೆ ತೊಡಗಬೇಕಾಯಿತು. ಇದರಲ್ಲಿ ನಾವು ಸಂಪೂರ್ಣ ಯಶಸ್ವಿ ಆಗಿರದಿದ್ದರೂ ಪ್ರಗತಿ ಸಮಾಧಾನಕರವಾಗಿದೆ. ನಾವು ಸೊಳ್ಳೆಗಳಿಗೆ ಮಾಡಿದ ರಕ್ತದಾನದ ಪುಣ್ಯ ಹೆಚ್ಚೋ ಅಥವಾ ಅವುಗಳನ್ನು ಕೊಂದ ಪಾಪದ ಭಾರ ಹೆಚ್ಚೋ ಎಂಬ ಜಿಜ್ಞಾಸೆಯೂ ಆಗಾಗ ಮನಸ್ಸಿನಲ್ಲಿ ಸುಳಿದು ಹೋಗುತ್ತದೆ. ಆದರೆ, ಅವುಗಳ ದೈನಂದಿನ ಸಂಹಾರದೊಂದಿಗೆ ಬೆಳೆಯುತ್ತಿರುವ ಪಾಪಪ್ರಜ್ಞೆ ಆಗಾಗ ನನ್ನನ್ನು ವಿಚಲಿತಗೊಳಿಸುತ್ತದೆ.

ಈವರೆಗೆ ಕೊಂದಿರಬಹುದಾದ ಸೊಳ್ಳೆಗಳ ಬಗ್ಗೆ ನಾವು ಲೆಕ್ಕ ಇಟ್ಟಿಲ್ಲವಾದರೂ ಆ ಸಂಖ್ಯೆ ಕೋಟಿಗಳಲ್ಲಿ ಇಲ್ಲದಿದ್ದರೂ ಲಕ್ಷಗಳಲ್ಲಂತೂ ಇದ್ದೇ ಇದೆ. ಒಂದೊಂದು ದಿನ ಅವುಗಳ ಹೆಣದ ರಾಶಿಯೇ ಬಿದ್ದಿರುತ್ತದೆ. ದಿನಾಲು ಒಂದು ಹತ್ತಿಪ್ಪತ್ತರಂತೆ, ಐವತ್ತು ಅರವತ್ತು ವರ್ಷಗಳಲ್ಲಿ ಎಷ್ಟಾಗಬಹುದೆಂದು ನೀವೇ ಲೆಕ್ಕಹಾಕಿ. ಸೊಳ್ಳೆಬತ್ತಿಗಳು, ಸುರುಳಿಗಳು, ಲೇಪನಗಳು, ಕ್ಷಣಾರ್ಧದಲ್ಲಿ ಕೊಲ್ಲುವ ಉರಿವ ಸಾಧನಗಳು, ಸಿಂಪಡಣೆಗಳು, ದ್ರಾವಣಗಳು ಒಂದೇ, ಎರಡೇ... ಸೊಳ್ಳೆ ಸಂಹಾರಕಗಳು! ಅದೂ ಸಾವಿರಾರು ಕೋಟಿ ರೂಪಾಯಿಯ ಬಿಜಿನೆಸ್. ಸೊಳ್ಳೆ ಹತ್ಯೆ ಮತ್ತು ಅದರಿಂದ ಆಗಬಹುದಾದ ಪಾಪಕರ್ಮದಲ್ಲಿ ಅವುಗಳ ಎಲ್ಲ ಉತ್ಪಾದಕರೂ ಭಾಗಿಗಳೇ. ನಾನೊಬ್ಬನೇ ಅಲ್ಲ, ಅವರಿಗೆಲ್ಲ ಇರದ ಪಾಪಪ್ರಜ್ಞೆ ನನಗೊಬ್ಬನಿಗೆ ಏಕೆ, ಎಲ್ಲ ಕೊಲ್ಲುವ ಸಾಧನಗಳ ಉತ್ಪಾದಕ ಮನುಷ್ಯನೇ ಆಗಿರುವಾಗ ಇಡೀ ಮನುಕುಲ ಒಂದಿಲ್ಲೊಂದು ಪಾಪಪ್ರಜ್ಞೆಯಿಂದ ಸದಾ ಬಳಲುತ್ತಿರಬೇಕು ಎಂಬ ಸಮಾಧಾನ ಕೂಡ ನನಗೆ ಇದೆ. ಸೊಳ್ಳೆಗಳ ನಿರ್ಮೂಲನೆಗೆ ಸರ್ಕಾರದ ಆರೋಗ್ಯ ಇಲಾಖೆಯಲ್ಲಿ ಒಂದು ವಿಭಾಗವೇ ಇದೆ. ಸೊಳ್ಳೆ ಜನ್ಯ ರೋಗಗಳಿಂದಾಗಿ ತಮ್ಮ ಬದುಕು ಕಟ್ಟಿಕೊಂಡ ವೈದ್ಯಕೀಯ ವ್ಯವಸ್ಥೆ, ಔಷಧಿ ತಯಾರಕ ಕಂಪನಿಗಳ ಜಾಲ ಇದೆ. ಹೀಗೆ ಸೊಳ್ಳೆಗಳಿಗೆ ಕೃತಜ್ಞರಾಗಿರುವವರೂ ಇದ್ದಾರೆ.

ಸೊಳ್ಳೆಗಳನ್ನು ಸಾಯಿಸಲು ಇತ್ತೀಚೆಗೆ ಬಂದಿರುವ ವಿದ್ಯುತ್ ಚಾಲಿತ ಬ್ಯಾಟುಗಳು ಹೆಚ್ಚು ಪರಿಣಾಮಕಾರಿಯಾಗಿವೆ. ಚಟ್‌ಪಟ್ ಎಂದು ಸೊಳ್ಳೆಗಳ ಮೇಲೆ ಬ್ಯಾಟು ಬೀಸಿ ಅವುಗಳನ್ನು ಸಂಹರಿಸುತ್ತಿದ್ದರೆ ಮನಸ್ಸಿಗೆ ಒಂದಿಷ್ಟು ಸಂತೃಪ್ತಿ, ಸಮಾಧಾನ. ದಿನಾಲು ಎಷ್ಟು ಸಾಯಿಸಿದರೂ ಅವುಗಳ ಸಂಖ್ಯೆ ಕ್ಷೀಣಿಸಿದಂತೆ ಕಂಡುಬರುವುದಿಲ್ಲ. ಮರುದಿನ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಹಾಜರಿರುತ್ತವೆ. ಭಯೋತ್ಪಾದಕರನ್ನು ನಮ್ಮ ಯೋಧರು ಕಳೆದ ಎರಡು ಮೂರು ದಶಕಗಳಿಂದ ಹೊಡೆದು ಉರುಳಿಸುತ್ತಿದ್ದರೂ ಅವರು ಮತ್ತೆಮತ್ತೆ ರಕ್ತಬೀಜಾಸುರರಂತೆ ವೃದ್ಧಿಸುತ್ತಲೇ ಇದ್ದಾರಲ್ಲವೆ. ಹಾಗೆಯೆ ಸೊಳ್ಳೆಗಳು. ಸೊಳ್ಳೆಗಳು ಬೆಂಬಿಡದ ನಿಜವಾದ ಜೀವನ ಸಂಗಾತಿಗಳು. ನಗರಗಳಲ್ಲಿ ಅವುಗಳ ಹುಟ್ಟು ಬೆಳವಣಿಗೆಗಳಿಗೆ ಪೂರಕ ಪರಿಸರ ಉಂಟು. ಕುಡಿಯಲು ನಮ್ಮ ರಕ್ತ ಉಂಟು. ಕೆಲವರಿಗಂತೂ ಅವು ಹೆಚ್ಚು ಇಷ್ಟ. ಅವರಲ್ಲಿ ನಾನೂ ಒಬ್ಬ. ನಾನು ಎಲ್ಲಿದ್ದರೂ ಅವು ನನ್ನನ್ನು ಅರಸಿ ಬರುತ್ತವೆ. ಮುತ್ತಿಡುತ್ತವೆ. ಅಷ್ಟಿಷ್ಟು ರಕ್ತ ಹೀರಿ ಕೃತಜ್ಞತೆ ವ್ಯಕ್ತಪಡಿಸುತ್ತವೆ. ಬಡಕಲು ದೇಹದ ಸೊಳ್ಳೆಗಳು ನನ್ನ ರಕ್ತಹೀರಿ ಮೈದುಂಬಿಕೊಂಡು ರಾಗಾಲಾಪದಲ್ಲಿ ತೊಡಗುತ್ತವೆ. ಆನಂತರದ ಉರಿತಕೆರೆತಗಳು ನನ್ನ ಹಣೆಬರಹ. ಅವು ನನ್ನನ್ನು ಒಂದು ಗಳಿಗೆ ನೆಮ್ಮದಿಯಾಗಿ ಕುಳಿತು ಓದಲು, ಟೀವಿ ನೋಡಲು ಬಿಡುವುದಿಲ್ಲ,ರಾತ್ರಿಯೆಲ್ಲ ಅವುಗಳ ಅಂಜಿಕೆ ಅಳುಕಿನಲ್ಲೆ ನಿದ್ರೆ ಮಾಡಬೇಕು, ಕುಳಿತಲ್ಲಿ ನಿಂತಲ್ಲಿ ಅವುಗಳ ಬಗ್ಗೆ ಗಮನವಿಡಬೇಕು, ಮನೆಯಲ್ಲಿ ಮಕ್ಕಳಿದ್ದರೆ ಇನ್ನೂ ಹೆಚ್ಚು ಕಾಳಜಿವಹಿಸಬೇಕು, ಅವುಗಳಿಂದಾಗಿ ಮಲೇರಿಯಾ ಮುಂತಾದ ರೋಗಗಳು ಬಂದರೆ

